**(ಇಂದು ದಿಃ 02.02.2026 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)**

ಪಾಟೀ ಸವಾಲುಃ- ಶ್ರೀ ಎಸ್ ಬಿ ಪಿ ವಕೀಲರಿಂದ ಪ್ರತಿವಾದಿಗಳ ಪರಃ-

ನನಗೆ ಓದಲು ಬರೆಯಲು ಬರುವುದಿಲ್ಲ. ನನ್ನ ಸಾಕ್ಷ್ಯದ ಪ್ರಮಾಣ ಪತ್ರದ ಸಂಗತಿಗಳು ನನಗೆ ತಿಳಿದಿರುವುದಿಲ್ಲ. ನಮ್ಮ ತಂದೆಗೆ ನಾಲ್ಕು ಜನ ಹೆಣ್ಣು ಮಕ್ಕಳು ಮತ್ತು ಇಬ್ಬರು ಗಂಡು ಮಕ್ಕಳು ಇದ್ದೇವೆ. ನಾಲ್ಕು ಜನರ ಹೆಣ್ಣು ಮಕ್ಕಳ ಹೆಸರುಗಳೆಂದರೆ ಭಾರತಬಾಯಿ, ಶಾರದಾಬಾಯಿ, ಕಲ್ಪನಾ ಮತ್ತು ದೀಪಿಕಾ ಆಗಿರುತ್ತವೆ. ನಮ್ಮ ಅಣ್ಣನಾದ ಶರಣಪ್ಪ ಮೃತಪಟ್ಟಿರುತ್ತಾನೆ. ಅವರ ಹೆಂಡತಿಯ ಹೆಸರು ಶರಣಮ್ಮ ಇರುತ್ತದೆ. ಅವರಿಗೆ ಮೂರು ಜನ ಮಕ್ಕಳು ಇರುತ್ತಾರೆ. ಅವರ ಹೆಸರು ಪೂಜಾ, ಆರತಿ ಮತ್ತು ಮಹೇಶ ಆಗಿರುತ್ತದೆ. ದಾವಾ ಸ್ವತ್ತು ನಮಗೆ ನಮ್ಮ ಹಿರಿಯರಿಂದ ಬಂದ ಸ್ವತ್ತು ಎಂದರೆ ಸರಿ. ದಾವಾ ಸ್ವತ್ತಿನ ಖಾತೆಯು ಈಗ ನಮ್ಮ ತಾಯಿಯ ಹೆಸರಿನಲ್ಲಿ ಇದೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ಎಲ್ಲರಿಗೂ ಸಮನಾದ ಹಕ್ಕು ಇದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ನನ್ನ ಸಾಕ್ಷ್ಯದ ಪ್ರಮಾಣ ಪತ್ರದಲ್ಲಿ ನಮೂದಿಸಿದಂತೆ ನಮ್ಮ ತಾಯಿಯು ದಾವಾ ಸ್ವತ್ತನ್ನು ಮೂರು ಭಾಗವಾಗಿ ವಿಗಂಡಿಸಿ ನೀಡಿದ್ದಾರೆ ಎಂದು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಾಯಿಯು ಸದರಿ ಪಾಲ ವಿಭಾಗವನ್ನು 2015-16 ನೇಯ ಸಾಲಿನಲ್ಲಿ ಮಾಡಿಕೊಟ್ಟಿರುತ್ತಾರೆ. ಸದರಿ ಪಾಲು ವಿಭಾಗದ ಸಮಯದಲ್ಲಿ ನಾವು ಮತ್ತು ನಮ್ಮ ನಾಲ್ಕು ಜನ ಸಹೋದರಿಯರು ಇದ್ದರು. ಸದರಿ ಪಾಲು ವಿಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ಲಿಖಿತ ಮಾತುಕತೆ ಆಗಿರುವುದಿಲ್ಲ. ಸದರಿ ಪಾಲ ವಿಭಾಗದ ಸಮಯದಲ್ಲಿ ನಮ್ಮ ಸಹೋದರಿಯರು ಹಾಜರು ಇದ್ದರು ಎಂದು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪೂರ್ವ ದಿಕ್ಕಿನ ಕ್ಷೇತ್ರ 3 ನೇ ಪ್ರತಿವಾದಿಗೆ ನೀಡಿದ್ದು ಮತ್ತು ಪಶ್ಚಿಮ ದಿಕ್ಕಿನ ಕ್ಷೇತ್ರ ನನಗೆ ನೀಡಲಾಗಿದೆ ಎಂದು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪಾಲು ವಿಭಾಗದ ಸಮಯದಲ್ಲಿ ಸದರಿ ಗ್ರಾಮಸ್ಥರು ಇರಲಿಲ್ಲ ಎಂದರೆ ಸಾಕ್ಷಿಯು ನಮ್ಮ ನಮ್ಮ ಮಧ್ಯೆ ಆಗಿದೆ ಎಂದು ನುಡಿಯುತ್ತಾರೆ. ನಮ್ಮ ತಂದೆಯ ತರುವಾಯ ದಾವಾ ಸ್ವತ್ತನ್ನು ನಾನೇ ಸಾಗುವಳಿ ಮಾಡುತ್ತಿದ್ದೇನೆ ಎಂದರೆ ಸಾಕ್ಷಿಯು ಮೂರು ಹಿಸ್ಸೆ ಇದೆ ಎಂದು ನುಡಿಯುತ್ತಾರೆ. ನಮ್ಮ ತಾಯಿಯ ಹಿಸ್ಸೆಯು ಗೇಣಿಗೆ ಹಾಕಿ ಹಣವನ್ನು ಪಡೆದಿರುತ್ತಾಳೆ. ನಮ್ಮ ತಾಯಿಯು ನಾಮದೇವ್ ಎಂಬುವವರಿಗೆ ಸದರಿ ಜಮೀನು ಗೇಣಿಗೆ ನೀಡಿರುತ್ತಾರೆ. ಪ್ರತಿ ಎಕರೆಗೆ ರೂ.25,000/- ಗಳಿಗೆ ಗೇಣಿಗೆ ನೀಡಿರುತ್ತಾರೆ. ನಮ್ಮ ತಾಯಿ ತನ್ನ ಹಿಸ್ಸೆಯ ಜಮೀನನ್ನು ಗೇಣಿಗೆ ನೀಡಿದ ವಿಚಾರ ನನ್ನ ಸಾಕ್ಷ್ಯದ ಪ್ರಮಾಣ ಪತ್ರದಲ್ಲಿ ನಮೂದು ಮಾಡಿರುವುದಿಲ್ಲ. ನನ್ನ ಸಾಕ್ಷ್ಯದ ಪ್ರಮಾಣ ಪತ್ರದಲ್ಲಿ ನಾನು ನಮ್ಮ ತಾಯಿಯ ಹಿಸ್ಸೆಯ ಜಮೀನನ್ನು

ಗೇಣಿಗೆ ನೀಡಿ ಸದರಿ ಹಣವನ್ನು ಪಡೆಯುತ್ತಿದ್ದೇನು ಎಂದು ನಮೂದಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ದಾವಾ ಸ್ವತ್ತಿನಲ್ಲಿ ಯಾವುದೇ ಪಾಲು ವಿಭಾಗ ಆಗಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಸದರಿ ಪಾಲು ವಿಭಾಗ ಯಾರ ಸಮಕ್ಷಮ ಆಗಿದೆ ಎಂದು ನನ್ನ ಸಾಕ್ಷ್ಯದ ಪ್ರಮಾಣ ಪತ್ರದಲ್ಲಿ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಮ್ಮ ಸಹೋದರಿಯರ ಹಕ್ಕನ್ನು ಲಪಾಟಿಯಿಸುವ ಉದ್ದೇಶದಿಂದ ಪಾಲ ವಿಭಾಗ ಆಗಿದೆ ಎಂದು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಪ್ರಭಾರ ಹಿರಿಯ ಸಿವಿಲ್ ನ್ಯಾಯಾಧೀಶರು,
ಆಳಂದ.